<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.59/2018. DW.-1.**

ದಿನಾಂಕಃ**10.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u> ವಾದಿಯರ ಪರ ಶ್ರೀ ಕೆ ಎನ್ ಆರ್ ವಕೀಲರಿಂದಃ-

ನಾನು ಪಟ್ಟಣಗೆರೆ ಪಂಚಾಯಿತಿಗೆ ಬಂದು 4 ತಿಂಗಳು ಆಗಿದೆ. ನನಗೂ ಮುಂಚೆ ದಯಾನಂದ ರವರು ಪಿ ಡಿ ಓ ಆಗಿದ್ದರು. 2019 ರಲ್ಲಿ ದಾಸಪ್ಪ ರವರು ಪಿ ಡಿ ಓ ಆಗಿದ್ದರು. ಪಟ್ಟಣಗೆರೆ ಊರಿನ ಪಕ್ಕದಲ್ಲಿ ವೇದನದಿ ಹರಿಯುತ್ತದೆ ಎಂದರೆ ಸರಿ. ಪಂಚಾಯಿತಿ ವ್ಯಾಪ್ತಿಯಲ್ಲಿ ದೊಡ್ಡಮ್ಮ ದೇವಸ್ಥಾನದ ಬಳಿ, ಹೈಸ್ಕೂಲ್ ಬಳಿ, ನದಿಯ ಬಳಿ, ಅಂಬೇಡ್ಕರ್ ನಗರದಲ್ಲಿ, ಬಸವಣ್ಣ ದೇವಸ್ಥಾನದ ಬಳಿ ಬೋರ್ವೆಲ್ ಗಳು ಇವೆ ಎಂದರೆ ಸರಿ. ಈ ಬೋರ್ವೆಲ್ ಗಳಿಂದ ನೀರು ಸರಬರಾಜು ಆಗುತ್ತಿದೆ ಎಂದರೆ ಸರಿ. ನಿ ಪಿ 16 ರಿಂದ 20 ರ ಪೋಟೋಗಳಲ್ಲಿ ಕಾಣುವ ಬೋರ್ವೆಲ್ ಗಳು ಮೇಲೆ ಹೇಳಿದ ಬೋರ್ವೆಲ್ ಗಳು ಎಂದರೆ ಸರಿ. ಈ 5 ಬೋರ್ವೆಲ್ ಗಳಲ್ಲದೆ ಇನ್ನು 3 ಬೋರ್ವೆಲ್ ಗಳು ಸದರಿ ಗ್ರಾಮದ ವ್ಯಾಪ್ತಿಯಲ್ಲಿ ಇದೆ ಎಂದರೆ ಸರಿಯಲ್ಲ, ಒಟ್ಟು 6 ಬೋರ್ವೆಲ್ ಗಳು ಗ್ರಾಮದ ವ್ಯಾಪ್ತಿಯಲ್ಲಿ ಇದೆ.

ನಾನು ವಾದಿಯ ಆಸ್ತಿ ನೋಡಿರುತ್ತೇನೆ. ನಿಪಿ15 ರ ಪೋಟೋದಲ್ಲಿ ಕಾಣುವ ಅಡಿಕೆ ತೋಟ ವಾದಿಯದ್ದು ಎಂದರೆ ಸರಿ. ಪಂಚಾಯಿತಿಯ ಸದಸ್ಯರು ಮತ್ತು ಇತರ ಗ್ರಾಮಸ್ಥರು ವಾದಿಯ ಅಡಿಕೆ ತೋಟದ ಬಳಿ ಹೋಗಿ ತಂತಿ ಕಂಬ ಮುರಿದು ಹಾಕಿ ಬೋರ್ವೆಲ್ ಕೊರೆಸುತ್ತಿದ್ದಾಗ ವಾದಿಯ ದೂರು ನೀಡಿರುವ ವಿಚಾರ ಗೊತ್ತಿರುತ್ತದೆಯೇ ಎಂದರೆ ಅಲ್ಲಿ ತಂತಿ ಕಂಬ ಇರುವುದಿಲ್ಲ, ತಂತಿ ಕಂಬ ಮುರಿದಿರುವುದಿಲ್ಲ, ಆದರೆ ಅವರು ದೂರು ನೀಡಿರುತ್ತಾರೆ. ವಾದಿ ನೀಡಿದ್ದ ದೂರಿನ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಹಿಂದಿನ ಪಿ ಡಿ ಓ ಸಹಃ ಒಂದು ದೂರು ನೀಡಿರುತ್ತಾರೆ.

ವಾದಿಯು ಜಿಲ್ಲಾಧಿಕಾರಿ ಕಛೇರಿಗೂ ಸಹ ದೂರು ನೀಡಿದ್ದು, ಆ ನಂತರ ಜಿಲ್ಲಾಧಿಕಾರಿಯವರು ಅವರ ಜಮೀನನ್ನು ಅಳತೆ ಮಾಡಿಸಿರುವ ವಿಚಾರ ನನಗೆ ಗೊತ್ತಿರುತ್ತದೆ. ಸದರಿ ಅಳತೆ ಕಾರ್ಯ ಮಾಡಿದವರು, ಬೋರ್ವೆಲ್ ಕೊರೆಸಿರುವ ಜಾಗ ವಾದಿಯ ಜಾಗದ ಒಳಗೆ ಬರುತ್ತದೆ ಎಂದು ವರದಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೇಸು ದಾಖಲು ಮಾಡಿದ ನಂತರವೂ ಸಹಃ ನ್ಯಾ.ನಿಯೋಗಿಯವರನ್ನು ನೇಮಕ ಮಾಡಿ ಸದರಿಯವರು ಮಾಡಿದ ಸರ್ವೆಯಲ್ಲಿಯೂ ಸಹಃ ಬೋರ್ವೆಲ್ ವಾದಿಯ ಜಮೀನಿನಲ್ಲಿ ಬರುತ್ತದೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ, ರಸ್ತೆಯ ಪಕ್ಕದಲ್ಲಿ ಬರುತ್ತದೆ ಎಂದು ನೀಡಿರುತ್ತಾರೆ. ನಾನು ನ್ಯಾ.ನಿಯೋಗಿಯವರ ವರದಿ ಮತ್ತು ನಕ್ಷೆಯನ್ನು ನೋಡಿರುವುದಿಲ್ಲ. ನ್ಯಾ.ನಿಯೋಗಿಯವರು ಸಲ್ಲಿಸಿರುವ ನಕ್ಷೆಯನ್ನು ಸಾಕ್ಷಿಗೆ ತೋರಿಸಿ ರಸ್ತೆಯ ಪಕ್ಕದಲ್ಲಿ ಪಾಯಿಂಟ್ ಮಾಡಿರುವ ಕೊಳವೆ ಬಾವಿ ವಾದಿಯ ಜಮೀನಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ, ಅವರು ಆ ರೀತಿ ತೋರಿಸಿರುತ್ತಾರೆ.

ವಾದಿಯ ಜಮೀನು ಒಟ್ಟು 1 ಎಕರೆ 27 ಗುಂಟೆ ಇದೆ. ವಾದಿಯ ಜಮೀನಿನಲ್ಲಿ ಎಷ್ಟು ವರ್ಷದ ಮರಗಳು ಇವೆ ಎಂದು ನನಗೆ ಹೇಳಲಾಗುವುದಿಲ್ಲ. ವಾದಿಯ ಜಮೀನಿನ ಸುತ್ತ ತಂತಿ ಬೇಲಿ ಇದೆ ಎಂದರೆ ಸರಿ.

ವಾದಿಯು ಅವರ ಜಮೀನಿನಲ್ಲಿ ಕೊರೆಸಿರುವ ಹಳೆಯ ಕೊಳವೆ ಬಾವಿಯನ್ನು ನಾನು ನೋಡಿರುವುದಿಲ್ಲ. ಪಂಚಾಯಿತಿಯಿಂದ ಕೊರೆಸಿದ ಕೊಳವೆಬಾವಿಗೂ ಹಾಗೂ ವಾದಿಯ ಜಮೀನಿನಲ್ಲಿ ಮೊದಲೇ ಕೊರಸಿದ್ದ ಬಾವಿಗಳ ನಡುವೆ 100 – 150 ಅಡಿ ಅಂತರ ಇದೆ ಎಂದರೆ ನನಗೆ ಗೊತ್ತಿಲ್ಲ. ಪಂಚಾಯಿತಿಯವರು ಕೊಳವೆ ಬಾವಿ ಕೊರೆಸಿದ ನಂತರದಲ್ಲಿ ವಾದಿಯು ಮೊದಲು ಕೊರೀಸಿದ್ದ ಕೊಳವೆ ಬಾವಿಯಲ್ಲಿ ನೀರು ಬರುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಅವರ ಹಳೆಯ ಕೊಳವೆ ಬಾವಿಯನ್ನು ಈಗ ಮುಚ್ಚಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಜಮೀನಿನ ಉತ್ತರ ಮತ್ತು ಪೂರ್ವಕ್ಕೆ ದಾರಿ ಇದೆ ಎಂದರೆ ಸರಿ. ವಾದಿಯ ಜಮೀನನ್ನು ನಮ್ಮ ಗ್ರಾಮಪಂಚಾಯಿತಿಯವರು ಅಥವಾ ಸರ್ಕಾರದವರು ಭೂ-ಸ್ವಾಧೀನ ಮಾಡಿಕೊಂಡಿರುತ್ತಾರೆಯೇ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾರಿಯನ್ನು ವಾದಿಯೇ ಅವರ ಸ್ವ-ಇಚ್ಛೆಯಿಂದ ಜನರು ಓಡಾಡಲಿ ಎಂದು ಬಿಟ್ಟಿರುತ್ತಾರೆ ಎಂದರೆ ಸರಿ.

ದಾರಿ ಬಿಟ್ಟ ನಂತರ ವಾದಿಯು ಅವರ ಜಮೀನಿನ ಸುತ್ತಲು ಬೇಲಿ ಹಾಕಿಕೊಂಡಿರುತ್ತಾರೆ ಎಂದರೆ, ಮೊದಲು ಬೇಲಿ ಇರಲಿಲ್ಲ. ನ್ಯಾ.ನಿಯೋಗಿಯವರು ಅಲ್ಲಿ ಯಾವುದೇ ರಸ್ತೆ ಇಲ್ಲ ಹಾಗೂ ಭೂ-ಸ್ವಾಧೀನವಾಗಿಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಇನ್ನೊಮ್ಮೆ ಸರ್ವೆ ಕಾರ್ಯ ಮಾಡಿಸಿ ಪರಿಶೀಲನೆ ಮಾಡಬೇಕು ಎಂದು ನುಡಿಯುತ್ತಾರೆ.

ಗ್ರಾಮ ಪಂಚಾಯತಿಯವರು ವಾದಿಯ ಜೊತೆಗೆ ಸರಿ ಇಲ್ಲದೇ ಇರುವಂತಹಃ ಪ್ರತಿವಾದಿಗಳ ಜೊತೆ ಷರಿಕ್ಕಾಗಿ ರಾತ್ರೋರಾತ್ರಿ ವಾದಿಯು ಜಮೀನಿನ ತಂತಿ ಕಂಬ ತೆಗೆದು ಕೊಳವೆ ಬಾವಿ ಕೊರೆದಿರುತ್ತೇವೆ ಎಂದರೆ ಆ ಅವಧಿಯಲ್ಲಿ ನಾನು ಪಿ ಡಿ ಓ ಆಗಿ ಅಲ್ಲಿ ಇರಲಿಲ್ಲ ನನಗೆ ಗೊತ್ತಿಲ್ಲ.

ಒಂದು ಕೊಳವೆ ಬಾವಿಯಿಂದ ಇನ್ನೊಂದು ಕೊಳವೆ ಬಾವಿ ಕೊರೆಸಲು ಕನಿಷ್ಟ 500 ಮೀ ಅಂತರ ಇರಬೇಕು ಎಂದು ಸರ್ಕಾರದಿಂದ ನಿರ್ದೇಶನ ಇದೆ ಎಂದರೆ ಸರಿ, ಮೊದಲ ಆದ್ಯಾತೆಯಾಗಿ ಕುಡಿಯುವ ನೀರಿಗಾಗಿ ನೀಡಬೇಕು ಎಂದು ಆದ್ಯಾತೆ ಇರುತ್ತದೆ. ಕುಡಿಯುವ ನೀರಿನ ಸಮಸ್ಯೆ ಇದ್ದಾಗ ಖಾಸಗಿ ಕೊಳವೆ ಬಾವಿ ಮಾಲೀಕರಿಗೆ ಇಂತಿಷ್ಟು ಹಣ ಎಂದು ನೀಡಿ ಅವರಿಂದ ನೀರನ್ನು ಖರೀದಿ ಮಾಡಿ ಸರಬರಾಜು ಮಾಡಬೇಕಾದ ಕ್ರಮ / ನಿರ್ದೇಶನ ಇರುತ್ತದೆ ಎಂದರೆ ಸರಿ. ನಮ್ಮ ಪಂಚಾಯಿತಿಯಿಂದ ವಾದಿಗೆ ಅವರ ಕೊಳವೆ ಬಾವಿಯಿಂದ ನೀರು ಕೊಡುವಂತೆ ಕೋರಿ ನೋಟೀಸು ನೀಡಿರುವುದಿಲ್ಲ.

ವಾದಿಗೆ ದಾವಾ ಸ್ವತ್ತು ಹೊರತು ಪಡಿಸಿ ಬೇರೆ ಯಾವುದೇ ಆದಾಯ ಮೂಲ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಪಂಚಾಯಿತಿಯಿಂದ ಏಕಾಏಕಿ ಕೊಳವೆ ಬಾವಿ ಕೊರೆಸಿದ್ದರಿಂದ ವಾದಿಯ ಹಳೆಯ ಕೊಳವೆ ಬಾವಿ ನೀರು ಸಿಗದೆ ಬತ್ತಿ ಹೋಗಿ ಅವರ ತೋಟ ಹಾಳಾಗುತ್ತಿದೆ ಎಂದರೆ ಸರಿಯಲ್ಲ. ನಮ್ಮ ಪಂಚಾಯಿತಿಯವರ ಕೃತ್ಯದಿಂದ ವಾದಿಗೆ ನಷ್ಟವಾಗಿದೆ ಎಂದರೆ ಸರಿಯಲ್ಲ.

ನಾವು ಇತರ ಪ್ರತಿವಾದಿಗಳ ಜೊತೆ ಷರಿಕ್ಕಾಗಿ ವಾದಿಗೆ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ವಾದಿಯ ಜಮೀನಿನಲ್ಲಿ ಅನಧೀಕೃತವಾಗಿ ಕೊಳವೆ ಬಾವಿ ಕೊರೆಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಪಟ್ಟಣಗೆರೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಹೆಚ್ಚಿನದಾಗಿ ದೇವಾಂಗ ಸಮಾಜದವರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಸಹಃ ದೇವಾಂಗ

ಸಮಾಜದವರು ಎಂದರೆ ನನಗೆ ಗೊತ್ತಿಲ್ಲ. ವಾದಿಯು ದೇವಾಂಗ ಸಮಾಜದವರ ಮಾತು ಕೇಳದೇ ಇದ್ದ ಕಾರಣ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ವಾದಿಯ ಜಮೀನಿನಲ್ಲಿ ಕೊಳವೆ ಬಾವಿ ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಊರಿನವರು ಸಹಃ ವಾದಿಗೆ ಬಹಿಷ್ಕಾರ ಮಾಡಿ ಊರಿನಿಂದ ಆಚೆಗೆ ಇಟ್ಟಿದ್ದರು ಎಂದರೆ ಸರಿಯಲ್ಲ. ನಾವು ಊರಿನ ಜನರಿಗೆ ಕುಡಿಯುವ ನೀರಿನ ಕೊರತೆ ಇದ್ದ ಕಾರಣ ಸದರಿ ಕೊಳವೆ ಬಾವಿ ಕೊರೆಸಿರುತ್ತೇನೆ. ಪಂಚಾಯಿತಿಯವರು ಸದರಿ ಕೊಳವೆ ಬಾವಿ ಕೊರೆಸಿದ್ದ ಸಮಯದಲ್ಲಿ ಪಂಚಾಯಿತಿಯಲ್ಲಿ ನೀರಿನ ಸಮಸ್ಯೆ ಇರಲಿಲ್ಲ ಎಂದರೆ ಸರಿಯಲ್ಲ. ಕೊಳವೆ ಬಾವಿ ಇರುವ ಜಾಗಕ್ಕು, ನಮ್ಮ ಪಂಚಾಯಿತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ರಸ್ತೆಯ ಬದಿಯಲ್ಲಿ ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ತಹಶೀಲ್ದಾರ್ ರವರು ಸಹಃ ವಾದಿಯ ಜಮೀನಿನ ಒಳಗೆ ಕೊಳವೆ ಬಾವಿ ಬರುತ್ತದೆ ಎಂದು ವರದಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಪೋಟೋದಲ್ಲಿ ಕಾಣುತ್ತಿರುವ ಬೇಲಿ ಮೊದಲು ಇರಲಿಲ್ಲ, ನಾವು ಕೊಳವೆ ಬಾವಿ ಕೊರೆಸಿದ ನಂತರದಲ್ಲಿ ಹಾಕಿ ಕೊಂಡಿರುತ್ತಾರೆ. ಈಗ ನೋಡುತ್ತಿರುವ ಪೋಟೋದಲ್ಲಿ ಕಾಣುವ ಕೊಳವೆ ಬಾವಿ ಪಂಚಾಯಿತಿಯಿಂದ ತೆಗೆದ ಕೊಳವೆ ಬಾವಿ ಎಂದರೆ ಸರಿ. ಸಾಕ್ಷಿಯು ಸದರಿ ಪೋಟೋವನ್ನು ಒಪ್ಪಿಕೊಂಡ ಮೇರೆಗೆ ಅದನ್ನು ನಿಪಿ23 ಎಂದು ಗುರುತಿಸಲಾಯಿತು.

ತಹಶೀಲ್ದಾರ್ ರವರೇ ಸದರಿ ಸ್ವತ್ತಿನಲ್ಲಿ ಯಾವುದೇ ನಕಾಶೆ ಕಂಡ ದಾರಿ ಇಲ್ಲ, ಅಲ್ಲಿ ಯಾವುದೇ ಜಾಗವನ್ನು ಭೂ-ಸ್ವಾಧೀನ ಪಡಿಸಿಕೊಂಡಿರುವುದಿಲ್ಲ ಎಂದು ವರದಿ ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಸುಳ್ಳು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಿಡಿ 9 ರ ಪ್ರಕಾರ ಮೊದಲೇ ತಂತಿ ಬೇಲಿ ಇತ್ತು ಎಂದರೆ ಸರಿಯಲ್ಲ, ಅದು ಕೊಳವೆ ಬಾವಿ ಕೊರೆಸಿದ ನಂತರದಲ್ಲಿ ತೆಗೆದ ಪೋಟೋ ಆಗಿರುತ್ತದೆ. ನಿಡಿ 9 ರಲ್ಲಿ ತಂತಿ ಕಂಬ ಕಾಣುತ್ತಿದೆ ಎಂದರೆ ಸರಿ.

ವಾದಿಯ ಹೆಸರಿಗೆ ಇರುವ ಪಹಣಿಯನ್ನು ನಿಡಿ 14 ರಂತೆ ಹಾಜರುಪಡಿಸಿದ್ದೇವೆ ಎಂದರೆ ಸರಿ. ನಿಡಿ 15 ರಿಂದ 17 ರ ದಾಖಲೆಗೆ ಸರ್ಕಾರದ ಮಾನ್ಯತೆ ಇಲ್ಲ ನಾವು ಸುಳ್ಳು

ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾವು ರಸ್ತೆಯನ್ನು ಅಭಿವೃದ್ಧಿ ಪಡಿಸಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ನೋಡುತ್ತಿರುವ ನಿಪಿ 8 ರ ಫೋಟೋದಲ್ಲಿ ರಸ್ತೆಯ 2 ಕಡೆಯು ತಂತಿ ಬೇಲಿ ಇದೆ ಎಂದರೆ ಇತ್ತೀಚೆಗೆ ಹಾಕಿಕೊಂಡಿರುತ್ತಾರೆ. ನಿಪಿ 8 ರಲಿ ಕಾಣುವ ತಂತಿ ಬೇಲಿ ಹೊಸದೋ ಅಥವಾ ಹಳೆಯದ್ದೋ ಎಂದು ನನಗೆ ಗೊತ್ತಾಗುತ್ತಿಲ್ಲ.

ಪಂಚಾಯಿತಿಯಿಂದ ಕೊರೆಸಿದ ಸದರಿ ಕೊಳವೆ ಬಾವಿಯ ನೀರನ್ನು ವಾದಿಯು ಅವರ ಬಾವಿಯ ನೀರು ಬತ್ತಿ ಹೋಗಿದ್ದರಿಂದ ಉಪಯೋಗಿಸುತ್ತಿದ್ದಾರೆ ಎಂದರೆ ವಾದಿಯು 2008 ರಿಂದಲೇ ಸದರಿ ಬಾವಿಯ ನೀರನ್ನು ಉಪಯೋಗಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಕೊಳವೆ ಬಾವಿಯಲ್ಲಿ ಪಂಚಾಯಿತಿಯವರು ಅಳವಡಿಸಿರುವ ಮೋಟಾರ್ ಅನ್ನು ವಾಪಾಸು ತೆಗೆದುಕೊಳ್ಳುವಂತೆ ನಮಗೆ ತಿಳಿಸಿದರು ಸಹಃ ನಾವು ವಾಪಾಸು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಮಗೆ ಸದರಿ ಕೊಳವೆ ಬಾವಿ ಕೊರೆಸುವ ಹಕ್ಕು ಇಲ್ಲದೇ ಇದ್ದರು ಸಹಃ ಕೊರೆಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.